ಊ) ಹೌದು, ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಲಾಟರಿ ಉದ್ಯಮವನ್ನು ನಿಷೇಧಿಸಿದರೆ ಲಾಟರಿ ಉದ್ಯಮದಿಂದ ಬರುತ್ತಿರುವ ವರಮಾನ ಕೈತಪ್ಪಿ ಹೋಗುತ್ತದೆ. ಟಕೇಟುಗಳ ಮಾರಾಟದ ಆಧಾರದ ಮೇಲೆ ವರಮಾನ ಅವಲಂಬಿತ ವಾಗಿರುವುದರಿಂದ ನಷ್ಟದ ಬಗ್ಗೆ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ.

795 (388) ಶ್ರೀ ಶಂಕಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಾದ್ಯಂತ ಇರುವ ಯಾವ ಯಾವ ಸಣ್ಣ ಕೈಗಾರಿಕೆಗಳು ಮತ್ತು ಯಾವ ಯಾವ ಉತ್ಪನ್ನಗಳನ್ನು ತಯಾರಿಸುತ್ತಿವೆ ;

ಆ) ಈ ಕೈಗಾರಿಕೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ;

ಇ) ಪ್ರಸ್ತುತ ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರಕ್ಕೆ ತಿಳಿದಿದೆಯೇ ;

ಈ) ಹಾಗಿದ್ದಲ್ಲಿ, ಆ ಸಮಸ್ಯೆಗಳು ಯಾವುವು ;

ಉ) ಸಣ್ಣ ಕೈಗಾರಿಕೋದ್ಯಮಿಗಳ ಬೇಡಿಕೆಗಳು ಯಾವುವು ; ಈ ಸಮಸ್ಯೆಗಳ ಪರಿಹಾರದ ಹಾಗೂ ಕೈಗಾರಿಕೋದ್ಯಮಿಗಳ ಬೇಡಿಕೆಗಳ ಈಡೇರಿಕೆ ವಿಚಾರದಲ್ಲಿ ಈವರೆಗೆ ಸರ್ಕಾರ ಯಾವ ಯಾವ ಕ್ರಮ ಹಾಗೂ ಮುಂದೆ ಯಾವ ಯಾವ ಕ್ರಮ ವಹಿಸುವುದು ?

ಶ್ರೀ ಶಿವಾನಂದ ಎಸ್. ನಾಯಕ್ (ಕೈಗಾರಿಕಾ ಸಚಿವರು):

ಅ) ಮೈಸೂರು ನಗರ ಮತ್ತು ಮೈಸೂರು ಜಿಲ್ಲೆಯಾದ್ಯಂತ ಇರುವ ಸಣ್ಣ ಕೈಗಾರಿಕೆಗಳು 21684.

ಈ ಕೈಗಾರಿಕೆಗಳು ಮುಖ್ಯವಾಗಿ ಮರದ ಕೈಗಾರಿಕೆಗಳು, ಜನರಲ್ ಇಂಜಿನಿಯರಿಂಗ್, ರೈಸ್‌ಮಿಲ್, ಫ್ಲೋರ್‌ಮಿಲ್, ರಾಸಾಯನಿಕ ಆಧಾರಿತ ಘಟಕ, ಸೋಪ್ಸ್ ಅಂಡ್ ಡಿಟರ್‌ಜಂಟ್ಸ್, ಫಿನಾಯಿಲ್, ಗಂಧದ ಕಡ್ಡಿ, ಪ್ಲಾಸ್ಟಿಕ್ ಆಧಾರಿತ, ಕ್ಯಾಂಡಲ್ಸ್, ಇಟ್ಟಿಗೆ ತಯಾರಿಕೆ, ಮೊಸಾಯಿಕ್ ಟೈಲ್ಸ್, ಗ್ರಾನೈಟ್ ಕಟ್ಟಿಂಗ್ ಅಂಡ್ ಪಾಲಿಶಿಂಗ್, ಜಲ್ಲಿ ತಯಾರಿಕಾ ಘಟಕ, ಆಹಾರ ಉತ್ಪಾದನಾ ಘಟಕ, ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಘಟಕಗಳು, ಪ್ರಿಂಟಿಂಗ್ ಪ್ರೆಸ್, ಎಲೆಕ್ಟ್ರಾನಿಕ್ಸ್ ರೆಡಿಮೇಡ್ ಗಾರ್ಮೆಂಟ್ಸ್ ಘಟಕ ಇತ್ಯಾದಿ.

ಆ) ಈ ಕೈಗಾರಿಕೆಗಳಲ್ಲಿ ಸುಮಾರು 105691 ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

ಇ) ತಿಳಿದಿದೆ.

ಈ) ಮೂಲಭೂತ ಸೌಕರ್ಯಗಳ ಕೊರತೆ, ಜಾಗತೀಕರಣ ಹಾಗೂ ಉದಾರೀಕರಣ ನೀತಿಯಿಂದಾಗಿ ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿ ಎದುರಿಸುತ್ತಿರುವ ತೀವ್ರ ಪೈಪೋಟಿ, ತಾಂತ್ರಿಕ ಉನ್ನತೀಕರಣದ ಕೊರತೆ ಇತ್ಯಾದಿ.

ಉ) ಮೂಲಭೂತ ಸೌಕರ್ಯಗಳಾದ ರಸ್ತೆ ಅಭಿವೃದ್ಧಿ, ಸಮರ್ಪಕ ನೀರು ಪೂರೈಕೆ, ಕೈಗಾರಿಕಾ ಪ್ರದೇಶದಲ್ಲಿ ದಾರಿದೀಪ ಅಳವಡಿಸುವುದು. ಈ ಬಗ್ಗೆ ಸರ್ಕಾರ ಈಗಾಗಲೇ ರೂ. 9.86 ಕೋಟಿ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ ಹಾಗೂ ಕೈಗಾರಿಕೆಗಳ ಬೆಳವಣಿಗೆ ಹಾಗೂ ಹೆಚ್ಚಿನ ಬಂಡವಾಳ ಆಕರ್ಷಿಸಲು, ಹೊಸ ಕೈಗಾರಿಕಾ ನೀತಿಯಡಿಯಲ್ಲಿ ಹಲವಾರು ರಿಯಾಯತಿ ಮತ್ತು ಪ್ರೋತ್ಸಾಹಗಳನ್ನು ನೀಡಲಾಗಿದೆ.

796 (389) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಹಸಿರೀಕರಣಗೊಳಿಸಲು ಅರಣ್ಯ ಇಲಾಖೆ ಕೈಗೊಂಡ ಯೋಜನೆಗಳಾವುವು ;

ಆ) ಮೈಸೂರು ನಗರದಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ವೆಚ್ಚ ಮಾಡಿರುವ ಹಣವೆಷ್ಟು ; (ವರ್ಷವಾರು ವಿವರ ನೀಡುವುದು) ;

ಇ) ಮೈಸೂರು ನಗರದಲ್ಲಿರುವ ಶಾಲಾ, ಕಾಲೇಜುಗಳು ವಿಶ್ವವಿದ್ಯಾನಿಲಯಗಳು ಮತ್ತು ಸರ್ಕಾರಿ ಕಛೇರಿ ಇತ್ಯಾದಿ ಸ್ಥಳಗಳಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಾವುವು ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಸಧ್ಯದಲ್ಲಿ ನಗರ ಪ್ರದೇಶಗಳಲ್ಲಿ ಹಸಿರೀಕರಣಗೊಳಿಸಲು ಅರಣ್ಯ ಇಲಾಖೆಯಲ್ಲಿ ಪ್ರದೇಶ ಹಸಿರೀಕರಣ (ರಾಜ್ಯ ವಲಯ) ಯೋಜನೆ ಇರುತ್ತದೆ. ಈ ಯೋಜನೆಯಲ್ಲಿ ನಗರಗಳ, ದಾರಿಗಳ ಬದಿಯಲ್ಲಿ, ಹೊಸ ಬಡಾವಣೆಗಳಲ್ಲಿ, ಶಾಲೆ–ಕಾಲೇಜು ಆವರಣಗಳಲ್ಲಿ ಮತ್ತು ಇತರ ಸಾರ್ವಜನಿಕ / ಸರ್ಕಾರಿ ಸ್ಥಳಗಳಲ್ಲಿ ಸಸಿಗಳನ್ನು ಬೆಳಸಲಾಗುತ್ತಿದೆ.

ಆ) ಮೈಸೂರು ನಗರದಲ್ಲಿ ಹಸಿರೀಕರಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ವಚ್ಚ ಮಾಡಿರುವ ಹಣದ ವರ್ಷವಾರು ವಿವರ ಈ ಕೆಳಕಂಡಂತೆ ಇರುತ್ತದೆ:–

ಅರಣ್ಯ ಇಲಾಖೆ

ವರ್ಷ	ಜೆಬಿಐಸಿ 1ನೇ ಹಂತ	ನಗರ ಹಸಿರೀಕರಣ	ಮೂಡಾ	ಎಂಸಿಸಿ	ಒಟ್ಟು
2003–04	48.805	5.180	––	––	53.985
2004–05	––	3.158	6.000	3.650	12.808
2005–06	––	3.740	18.500	1.440	23.680

ಇ) ಮೈಸೂರು ನಗರದ ಶಾಲಾ, ಕಾಲೇಜು ವಿಶ್ವ ವಿದ್ಯಾನಿಲಯಗಳ ಆವರಣದಲ್ಲಿ ಮತ್ತು ಇನ್ನಿತರೆ ಕಡೆಗಳಲ್ಲಿ ಈ ಕೆಳಕಂಡಂತೆ ಕಳೆದ 3 ವರ್ಷಗಳಲ್ಲಿ ಒಟ್ಟು 230 ಹೆ. ಪ್ರದೇಶದಲ್ಲಿ ಗಿಡಗಳನ್ನು ನೆಡಲಾಗಿದೆ.